**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ್ಯಾದಂಗಳವರ ನ್ಯಾಯಾಲಯ, ಕಡೂರು ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ**

**ಎಂ.ವಿ.ಸಿ.ನಂ. 225/2019**

ಆರ್‌ಡಬ್ಲ್ಯೂ: 3

ದಿನಾಂಕ 17-10-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: 4 ನೇ ಎದುರುದಾರರ ಪರ: ಶ್ರೀ ಸಿ ಜೆ ಎಂ ವಕೀಲರಿಂದ:

ನಾನು ಈ ಅರ್ಜಿಯಲ್ಲಿ 4 ನೇ ಎದುರುದಾರರ ಕಂಪನಿಯಲ್ಲಿ ಆಡಳಿತ ಅಧಿಕಾರಿಯಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಹೇಳಿಕೆ ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯವೆಲ್ಲಾ ಸತ್ಯವಾಗಿರುತ್ತದೆ. ಅದನ್ನು ಓದಿ ನೋಡಿ ಸಹಿ ಮಾಡಿರುತ್ತೇನೆ.

ಕಂಪನಿಯವರು ನೀಡಿರುವ ಆತರೈಸೇಷನ್ ಲೆಟರನ್ನು ಹಾಜರುಪಡಿಸಿದ್ದು ಅದನ್ನು ನಿಆರ್-8 ಎಂದು, ವಿಮಾ ಪಾಲಿಸಿಯನ್ನು ಹಾಜರುಪಡಿಸಿದ್ದು ಅದನ್ನು ನಿಆರ್-9 ಎಂದು, 2 ನೇ ಎದುರುದಾರರ ಚಾಲನಾ ಪರವಾನಿಗಿಯ ದೃಡೀಕೃತ ನಕಲನ್ನು ಹಾಜರುಪಡಿಸಿದ್ದು ಅದನ್ನು ನಿಆರ್-10 ಎಂದು ಗುರುತಿಸಲಾಯಿತು.

ಆದ್ದರಿಂದ ಅರ್ಜಿದಾರರ ಅರ್ಜಿಯನ್ನು ವಜಾ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲು: ಅರ್ಜಿದಾರರ ಪರ: ಶ್ರೀ ಕೆ ಎ ವಕೀಲರಿಂದ:

ಬೆಳ್ತಂಗಡಿ ಪೋಲೀಸರು ತನಿಖೆ ಮಾಡಿ ಜೆನ್ ಕಾರಿನ ಚಾಲಕ ಮೃತ ಆಶಿಶ್ ರವರ ವಿರುದ್ದ ಅಬೇಟೆಡ್ ಚಾರ್ಜ್ ಶೀಟ್

ಸಲ್ಲಿಸಿರುತ್ತಾರೆ ಎಂದರೆ ಸರಿ. ಅರ್ಜಿದಾರರು ಕೆಎ-03 ಎಸಿ-6268 ಕಾರಿನಲ್ಲಿ ಪ್ರಯಾಣ ಮಾಡುತ್ತಿದ್ದರು ಎಂದರೆ ಸರಿ. ಪ್ರಸ್ತುತ ಅರ್ಜಿಯ ಬಗ್ಗೆ ತಿಳಿದುಕೊಂಡಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪೋಲೀಸರು ಸಲ್ಲಿಸಿರುವ ದೋಷಾರೋಪಣಾ ಪತ್ರದ ಸಂಪೂರ್ಣ ದಾಖಲೆಗಳನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ ಎಂದರೆ ಸರಿ. ಅಪಘಾತದಲ್ಲಿ ಗಾಯಗೊಂಡ ಅರ್ಜಿದಾರರಾದ ನಿರ್ಮಲರವರಿಂದ ಪೋಲೀಸರು ದೂರನ್ನಾಗಲಿ ಹೇಳಿಕೆಯನ್ನಾಗಲಿ ಪಡೆದುಕೊಂಡಿಲ್ಲ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ಅಪಘಾತದ ನಂತರ ಜೆನ್ ಕಾರಿನ ಚಾಲಕ ಆಶಿಶ್ ರವರು ಮೃತ ಪಟ್ಟಿರುತ್ತಾರೆ ಎಂದರೆ ಸರಿ. ಅಪಘಾತದಲ್ಲಿ ಅರ್ಜಿದಾರರಾದ ನಿರ್ಮಲರವರ ತಲೆಗೆ ಪೆಟ್ಟು ಬಿದ್ದು ಅವರು ಕೋಮಾದಲ್ಲಿದ್ದರು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅಪಘಾತದಲ್ಲಿ ಗಾಯಗೊಂಡ ಅರ್ಜಿದಾರರಾದ ನಿರ್ಮಲ ಮತ್ತು ಸುರೇಶ್ ರವರು ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದರಿಂದ ಅವರ ಯಾವುದೇ ಹೇಳಿಕೆ ಪಡೆಯದೇ ಪೋಲೀಸರು ದೋಷಾರೋಪಣಾ ಪತ್ರ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಅರ್ಜಿದಾರರು ಪ್ರಯಾಣ ಮಾಡುತ್ತಿದ್ದ ಕೆಎ-03 ಎಸಿ-6268 ರ ಕಾರಿನ ಚಾಲಕನಾದ 2 ನೇ ಎದುರುದಾರರ ನಿರ್ಲಕ್ಷತನದಿಂದಲೇ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅರ್ಜಿದಾರರು

ತಮ್ಮ ಅರ್ಜಿಯಲ್ಲಿ ಅರ್ಜಿ ಸಲ್ಲಿಸುವ ಸಮಯದಲ್ಲಿ ಸದರಿ ಅಪಘಾತ ಅವರು ಪ್ರಯಾಣ ಮಾಡುತ್ತಿದ್ದ ಕೆಎ-03 ಎಸಿ-6268 ಕಾರಿನ ಚಾಲಕ ಹಾಗೂ ಜೆನ್ ಕಾರಿನ ಚಾಲಕ ಇಬ್ಬರ ತಪ್ಪಿನಿಂದಲೂ ಅಪಘಾತವಾಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಅರ್ಜಿಯಲ್ಲಿ ಆ ರೀತಿ ಇದೆ ಆದರೆ ದೂರಿನಲ್ಲಿ ಹಾಗೂ ದೋಷಾರೋಪಣಾ ಪತ್ರದಲ್ಲಿ ಜೆನ್ ಕಾರಿನ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ನಮೂದಿರುತ್ತದೆ ಎಂದು ನುಡಿಯುತ್ತಾರೆ. ಪರಿಹಾರ ಕೊಡುವುದನ್ನು ತಪ್ಪಿಸಿಕೊಳ್ಳಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಎರಡನೇ ಎದುರುದಾರ ಜಗದೀಶ್ ರವರಿಗೆ ಅಪಘಾತವಾದ ಸಮಯದಲ್ಲಿ ಕೆಎ-03 ಎಸಿ-6268 ಕಾರಿನ್ನು ಚಾಲನೆ ಮಾಡಲು ಸೂಕ್ತ ಚಾಲನೆ ಪರವಾನಿಗಿ ಹೊಂದಿದ್ದರು ಎಂದರೆ ಸಾಕ್ಷಿ ಸದರಿ ಕಾರು ಟ್ಯಾಕ್ಸಿಯಾಗಿದ್ದು ಸದರಿ ಟ್ಯಾಕ್ಸಿ ಚಾಲನೆ ಮಾಡಲು ಎರಡನೇ ಎದುರುದಾರರು ಸೂಕ್ತ ಚಾಲನಾ ಪರವಾನಿಗಿ ಹೊಂದಿರಲಿಲ್ಲ ಎಂದು ನುಡಿಯುತ್ತಾರೆ. ಅರ್ಜಿದಾರರಿಗೆ ನಮ್ಮ ಕಂಪನಿಯವರು ಸಹ ಪರಿಹಾರ ನೀಡಲು ಬಾದ್ಯರು ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 1 ನೇ ಎದುರುದಾರರ ಪರಃ ಶ್ರೀ ಎ ಎಸ್ ಎಸ್ ವಕೀಲರಿಂದಃ</u>

ಅಪಘಾತದ ಬಗ್ಗೆ ನಾನು ಮಾಹಿತಿಯನ್ನು ತಿಳಿದುಕೊಂಡಿರುತ್ತೇನೆ. ಪೋಲೀಸರು 2 ಮತ್ತು 3 ನೇ ಎದುರುದಾರರ

ಜತೆ ಷರೀಕ್ಕಾಗಿ ಒಂದನೇ ಎದುರುದಾರರ ಮಾಲೀಕತ್ವದ ಕೆಎ-09 ಎಂ-6548 ಜೆನ್ ಕಾರಿನ ಚಾಲಕ ವಿರುದ್ಧ ಸುಳ್ಳು ದೋಷಾರೋಪಣಾ ಪತ್ರವನ್ನು ಸಲ್ಲಿಸಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ಜೆನ್ ಕಾರಿನ ಚಾಲಕನಾದ ಆಶಿಶ್ ರವರು ಮೃತ ಪಟ್ಟಿರುವ ವಿಚಾರ ಗೊತ್ತಿದೆಯಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಅಪಘಾತ ಮೃತ ಆಶಿಶ್ ರವರ ಯಾವುದೇ ನಿರ್ಲಕ್ಷತನ ಇರುವುದಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಪರಿಹಾರ ನೀಡಲು ನಮ್ಮ ಸಂಸ್ಥೆ ಬಾಧ್ಯರು ಎಂದರೆ ಸರಿಯಲ್ಲ. ಸದರಿ ಅಪಘಾತವು ಕೆಎ-03 ಎಸಿ-6268 ರ ಕಾರಿನ ಚಾಲಕನಾದ ಎರಡನೇ ಎದುರುದಾರರ ತಪ್ಪಿನಿಂದಲೇ ಆಗಿರುತ್ತದೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 3 ನೇ ಎದುರುದಾರರ ಪರಃ ಶ್ರೀ ಹೆಚ್ ಟಿ ಆರ್ ವಕೀಲರಿಂದಃ</u>

ನಿಆರ್-9 ರ ವಿಮಾ ಪಾಲಿಸಿಯು ಪ್ಯಾಕೇಜ್ ಪಾಲಿಸಿಯಾಗಿರುತ್ತದೆ ಎಂದರೆ ಸರಿ. ನಿಆರ್-10 ರ ದಾಖಲೆಯು 2 ನೇ ಎದುರುದಾರರ ಚಾಲನಾ ಪರವಾನಿಗಿಯ ದೃಡೀಕೃತ ನಕಲಾಗಿದ್ದು ಅದನ್ನು ನಾನು ಮಾನ್ಯ ನ್ಯಾಯಾಲಯದಿಂದ ಪಡೆದಿರುತ್ತೇನೆ. ನಿಆರ್-10 ರ ಚಾಲನಾ ಪರವಾನಿಗಿಯು ಕೆಎ-03 ಎಸಿ-6268 ರ ಕಾರನ್ನು ಚಾಲನೆ ಮಾಡಲು ಸಮ್ಮತವಾದ ಪರವಾನಿಗಿಯಾಗಿರುತ್ತದೆ ಎಂದರೆ

ಸರಿಯಲ್ಲ. ಸದರಿ ದಾಖಲೆಯನ್ನು ಪಡೆದುಕೊಳ್ಳುವ ಪೂರ್ವದಲ್ಲಿ ಅದು ಸಮ್ಮತವಾದ ಚಾಲನಾ ಪರವಾನಿಗಿಯಾಗಿರುವುದಿಲ್ಲ ಎಂದು ಸಂಬಂದಪಟ್ಟ ಆರ್ ಟಿ ಒ ಕಚೇರಿಯಿಂದ ಹಿಂಬರಹ ಪಡೆದಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ. ಕೆಎ-03 ಎಸಿ-6268 ರ ಕಾರು ಅಪಘಾತದಲ್ಲಿ ಜಕ್ಕಂಗೊಂಡ ನಂತರ 3 ನೇ ಎದುರುದಾರರು ನಮ್ಮ ಕಂಪನಿಗೆ ಡ್ಯಾಮೇಜ್ ಕೊಡುವಂತೆ ಮನವಿ ಮಾಡಿಕೊಂಡಿದ್ದರು ಎಂದರೆ ಸರಿ. ಸದರಿ ಕ್ಲೇಮನ್ನು ನಮ್ಮ ಸಂಸ್ಥೆಯವರು ತಿರಸ್ಕರಿಸಿರುತ್ತಾರೆ ಎಂದರೆ ಸರಿ. ತದನಂತರ 3 ನೇ ಎದುರುದಾರರು ಚಿಕ್ಕಮಗಳೂರಿನ ಕನ್ಸುಮರ್ ಪೋರಂನಲ್ಲಿ ಅರ್ಜಿ ಸಲ್ಲಿಸಿದ್ದು ನಿಆರ್-3 ರಂತೆ ನಮ್ಮ ಸಂಸ್ಥೆ ಒ ಡಿ ಕ್ಲೇಮ್ ನೀಡುವಂತೆ ಆದೇಶವಾಗಿರುತ್ತದೆ ಎಂದರೆ ಸರಿ. ಸದರಿ ಆದೇಶದಂತೆ ನಮ್ಮ ಕಂಪನಿಯವರು ಒ ಡಿ ಕ್ಲೇಮನ್ನು ಪಾವತಿ ಮಾಡಿರುತ್ತಾರೆ ಎಂದರೆ ಸರಿ. ಮೇಲ್ಕಂಡ ಆದೇಶದಲ್ಲಿ 2 ನೇ ಎದುರುದಾರರ ಚಾಲನಾ ಪರವಾನಿಗಿ ಸಮ್ಮತ ಚಾಲನಾ ಪರವಾನಿಗಿ ಆಗಿರುತ್ತದೆ ಎಂದು ಆದೇಶವಾಗಿರುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಚಿಕ್ಕಮಗಳೂರಿನ ಕನ್ಸುಮರ್ ಪೋರಂನಲ್ಲಿ ನಮ್ಮ ತಕರಾರಿನಲ್ಲಿ 2 ನೇ ಎದುರುದಾರರ ಚಾಲನಾ ಪರವಾನಿಗಿ ವಿಚಾರವಾಗಿ ಮತ್ತು ಕೆಎ-03 ಎಸಿ-6268 ರ ಪಿಟ್ನೆಸ್ ವಿಚಾರವಾಗಿ ತಕರಾರು ಮಾಡಿರುತ್ತೇವಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ತಕರಾರನ್ನು ತಿರಸ್ಕರಿಸಿ ಒ ಡಿ ಕ್ಲೇಮನ್ನು

ನೀಡಿರುತ್ತಾರೆ ಎಂದರೆ ಸಾಕ್ಷಿ ಯಾವ ಆಧಾರದಲ್ಲಿ ಒ ಡಿ ಕ್ಲೇಮ್ ನೀಡಲಾಗಿದೆ ಎಂಬ ವಿಚಾರ ನನಗೆ ತಿಳಿದಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಪ್ಯಾಕೇಜ್ ಪಾಲಿಸಿಯಲ್ಲಿ ಕಾರಿನ ಸಹ ಪ್ರಯಾಣಿಕರು ಸಹ ಕವರೇಜ್ ಹೊಂದಿರುತ್ತಾರೆ ಎಂದರೆ ಸಾಕ್ಷಿ ಹೌದು ಆದರೆ ಟರ್ಮ ಅಂಡ್ ಕಂಡೀಷನ್ ಗೆ ಒಳಪಟ್ಟು ಎಂದು ನುಡಿಯುತ್ತಾರೆ. ನಮ್ಮ ಸಂಸ್ಥೆಯವರು ಒ ಡಿ ಕ್ಲೆಮನ್ನು ಸೆಟಲ್ ಮಾಡಿರುವುದರಿಂದ ಮೂರನೇ ವ್ಯಕ್ತಿಯ ಬಾದ್ಯಸ್ಥಿಕೆ ಸಹ ನಮ್ಮ ಕಂಪನಿಯದ್ದಾಗಿರುತ್ತದೆ ಎಂದರೆ ಸಾಕ್ಷಿ ಸರಿಯಲ್ಲ ಎಂದು ನುಡಿಯುತ್ತಾರೆ. ಒ ಡಿ ಕ್ಲೇಮನ್ನು ಸೆಟಲ್ ಮಾಡಿದ್ದರೂ ಸಹ 2 ನೇ ಎದುರುದಾರರಿಗೆ ಸಮ್ಮತವಾದ ಚಾಲನಾ ಪರವಾನಿಗಿ ಇರಲಿಲ್ಲ ಮತ್ತು ಕೆಎ-03 ಎಸಿ-6268 ಕಾರಿಗೆ ಪಿಟ್ನೆಸ್ ಸರ್ಟಿಪಿಕೇಟ್ ಇರಲಿಲ್ಲ ಎಂದು ಸುಳ್ಳು ತಕರಾರು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ದೋಷಾರೋಪಣಾ ಪಟ್ಟಿಯಂತೆ ಆಶಿಶ್ ರವರ ತಪ್ಪಿನಿಂದ ಆಗಿದೆ ಎಂದರೆ ಸರಿ. ಅರ್ಜಿದಾರರಿಗೆ ಪರಿಹಾರ ನೀಡಲು ನಮ್ಮ ಕಂಪನಿಯವರು ಬಾದ್ಯರು ಎಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ಕೆಎ-03 ಎಸಿ-6268 ಕಾರಿಗೆ ಪಿಟ್ನೆಸ್ ಸರ್ಟಿಪಿಕೇಟ್ ಸಹ ಚಾಲ್ತಿಯಲ್ಲಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪಿಟ್ನೆಸ್ ಸರ್ಟಿಪಿಕೇಟ್ ಎಕ್ಸ್‌ಪೈರ್ ಆಗಿದ್ದು ದಾಖಲೆ ಸಹ ಹಾಜರುಪಡಿಸಿರುತ್ತೇನೆ ಎಂದು ನುಡಿಯುತ್ತಾರೆ.

ಮರುವಿಚಾರಣೆಃ ಇಲ್ಲ

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.